ನಾವೇನು ಮಾಡಿಕೊಳ್ಳಬಹುದೆಂದು ಕೆಲವು ಸಂಸ್ಥೆಗಳು ನೋಟಿಫಿಕೇಷನ್, ಪ್ರಕಟಣೆಗಳನ್ನು ಕೊಟ್ಟಿದ್ದಾರೆ. ಏನು ಪ್ರಕಟಣೆ, ಪ್ರಿಡಿಕನ್ಸ್ ಮಾಡಿದ್ದಾರೆ ಅದು ಕ್ರಡಿಬಲ್ ಇದ್ದರೆ ಸರ್ಕಾರದ ಮಟ್ಟದಲ್ಲಿ ಏನು ಮಾಡಬೇಕು ಯಾವ ರೀತಿಯಾಗಿ ಜಾಗ್ರತೆಗೆ ಅವಕಾಶ ಮಾಡಿಕೊಡಬೇಕು ಎನ್ನುವುದರ ಬಗ್ಗೆ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಸಚಿವರಿಬ್ಬರು ಈ ದಿಶೆಯಲ್ಲಿ ಕುಳಿತು ಚರ್ಚೆ ಮಾಡಿ ಸಭೆ ನಡೆಸಿ ಕಾರ್ಯಕ್ರಮವನ್ನು ರೂಪಿಸುತ್ತಾರೆ. ಒಂದು ವೇಳೆ ಪ್ರಡಿಕನ್ ಕ್ರೆಡಿಬಲ್ ಇರಲಿಲ್ಲ ಅದು ಸೈಂಟಿಫಿಕ್ ಪ್ರಿಡಿಕ್ಷನ್ ಇರಲಿಲ್ಲದಿದ್ದರೆ, ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹಂಪನಗೌಡ ಬಾದರ್ಲಿ : ಈ ಬಗ್ಗೆ ನಮ್ಮ ಉತ್ತರ ಕರ್ನಾಟಕದ ಜನತೆಯಲ್ಲಿ ಭಯಭೀತಿ ವಾತಾವರಣ ಉಂಟಾಗಿದೆ. ಸುನಾಮಿ ದುರಂತದ ನಂತರ ಭಯಭೀತಿ ವಾತಾವರಣ ಉಂಟಾಗಿರುವುದರಿಂದ ಆ ಬಗ್ಗೆ ಮುಂಜಾಗ್ರತೆಯ ಕ್ರಮಗಳೇನನ್ನು ತೆಗೆದುಕೊಳ್ಳಬೇಕು ಎನ್ನುವ ವಿಚಾರದ ಬಗ್ಗೆ ಹವಾಮಾನ ಇಲಾಖೆಯ ನಿರ್ದೇಶಕರನ್ನು ಕರೆಯಿಸಿ, ಯಾವ ಪ್ರಮಾಣದಲ್ಲಿ ಮಳೆ ಬರುತ್ತದೆ, ಆಲಿಕಲ್ಲು ಮಳೆ ಇರುತ್ತದೆ ಎಂಬುದರ ಮಾಹಿತಿಯನ್ನು ಪಡೆದು ರೈತರಿಗೆ ಮುಂಜಾಗ್ರತೆಯ ರೂಪವಾಗಿ ತಿಳಿಸತಕ್ಕಂಥ ಪ್ರಯತ್ನ ಸರ್ಕಾರದಿಂದ ಆಗಲಿ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಹೇಗಾದರೂ ಮಾಡಿ ತೋಟಗಾರಿಕೆ ಬೆಳೆಗಳಿಗೆ ವಿಮೆ ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನೂ ಪರಿಶೀಲನೆ ಮಾಡಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : ತಮ್ಮ ಸಲಹೆಯನ್ನು ಪರಿಶೀಲಿಸುವಂತೆ ಕೃಷಿ ಸಚಿವರಿಗೆ ತಿಳಿಸುತ್ತೇನೆ.

ಋ) ವಿಷಯ : ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ಸಕ್ರಮಗೊಳಿಸುವ ಅವಧಿ ವಿಸ್ತರಿಸುವ ಬಗ್ಗೆ.

ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ಸಕ್ರಮ ಮಾಡಲು ಈ ತಿಂಗಳ ಕೊನೆ ಎಂದು ಪ್ರಕಟಿಸಲಾಗಿದ್ದು, ಆದರೆ ಸಕ್ರಮಗೊಳಿಸಲು ಅಭಿವೃದ್ಧಿ ಶುಲ್ಕ 18 ಸಾವಿರ ರೂಪಾಯಿ, ಪ್ರತಿ ಹೆಚ್‌ಬಿಗೆ 720 ರೂಪಾಯಿಗಳ ಸೆಕ್ಯುರಿಟಿ ಡಿಪಾಸಿಟ್ ಹಾಗೂ 1700 ರೂಪಾಯಿಗಳ ಮೀಟರ್ ಡಿಪಾಸಿಟ್ ಎಲ್ಲಾ ಸೇರಿ ನಾಲ್ಕು ಜನ ಇರುವಂಬಗಳಿದ್ದವರಿಗೆ20 ಸಾವಿರ ರೂಪಾಯಿಗಳಷ್ಟು ಹಣ ತುಂಬಬೇಕಾಗುತ್ತದೆ. ಇಷ್ಟೊಂದು ದೊಡ್ಡ ಮೊತ್ತದ ಹಣ ರೈತ ತುಂಬಲಾಗುತ್ತಿಲ್ಲ. ಅಭಿವೃದ್ಧಿ ಶುಲ್ಕವನ್ನು 5 ಸಾವಿರ ರೂಪಾಯಿಗಳಿಗೆ ಗೊತ್ತು ಮಾಡಿಸಲು, ಹಾಗು ಸಕ್ರಮಗೊಳಿಸುವ ಅವಧಿಯನ್ನು ವಿಸ್ತರಿಸಲು ಮಾನ್ಯ ಇಂಧನ ಸಚಿವರ ಗಮನ ತರಿಯಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಹಾಗೂ ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಅವರು ಈ ಬಗ್ಗೆ ನನಗೆ ಕಳುಹಿಸಿಕೊಟ್ಟಿದ್ದಾರೆ ಅದು ನನಗಿನ್ನೂ ತಲುಪಿಲ್ಲ, ಈ ಬಗ್ಗೆ ಅರ್ಧಗಂಟೆ ಚರ್ಚೆಯನ್ನೇ ಇಡಲಾಗಿದೆ, ಅದರ ಜೊತೆ ಇದನ್ನೂ ಸೇರಿಸಿ ಚರ್ಚೆ ಮಾಡಬಹುದಾಗಿದೆ.